ಅವನೂ ಅಬಿದಾಳಂತೆ ಅಸ್ಲಾಮನಿಗೆ ಇನ್ನೊಬ್ಬ ಸೋದರತ್ತೆ ಮಗ.

ಅಸ್ಲಾಂ ತಂದೆಗೆ ಮೂರು ಜನ ತಂಗಿಯರು. ಮೂರು ಜನ ತಮ್ಮಂದಿರು. ಎಲ್ಲರಿಗೂ ಹೆಣ್ಣುಮಕ್ಕಳು, ಗಂಡು ಹುಡುಗರು ಇದ್ದಾರೆ. ಆದರೂ ಒಬ್ಬರ ಮನೆಗೆ ಮತ್ತೊಬ್ಬರು ಸಂಬಂಧ ಮಾಡಿಕೊಳ್ಳುವುದಿಲ್ಲ. ಮದುವೆ ಮಾತನ್ನೇ ಎತ್ತುವುದಿಲ್ಲ.

ರಿಯಾಜನನ್ನು ಒಂದು ದಿನ ಕೇಳಿಯೇ ಬಿಟ್ಟ. 'ಎಷ್ಟೊ ಒಂದಿಷ್ಟು ತಗೊಂಡು ನಿಮ್ಮ ಸೋದರತ್ತೆ ಮಕ್ಕಳಲ್ಲಿ ಒಬ್ಬಳನ್ನು ಮದ್ವೆಯಾಗು ರಿಯಾಜ್, ಅವರದೂ ಸ್ವಲ್ಪ ಹೊರೆ ಕಡಿಮೆ ಮಾಡಿದಂಗಾಗ್ತದೆ' ಎಂದು. ಅವನು ಥಟ್ಟನೇ ನಕ್ಕು ಬಿಟ್ಟ. 'ಹೋಗಣ್ಣ.. ಸಂಬಂಧಿಕರಲ್ಲಿ ಮದ್ವೆಯಾದರೆ ವರದಕ್ಷಿಣೆನೇ ಕೊಡಲ್ಲ. ಹೋಗಲಿ ಓದಿರೋ ಹುಡುಗಿನಾದ್ರೂ ಅಲ್ಲ. ಮನೆ ಹತ್ತಿರ ಟ್ಯೂಶನು ಹೇಳಿ ಸಂಪಾದಿಸ್ತಾಳೆ ಅಂದ್ರೆ..' ಎಂದು ಬಿಟ್ಟ.

ಅಸ್ಲಾಂಗೆ ಸಿಟ್ಟು ಬಂತು. 'ನೀನೇನು ಮಹಾ ಓದಿಯಾ. ಎಲೆಕ್ಟ್ರಿಷಿಯನ್ ಕೆಲಸ ತಾನೇ ಮಾಡ್ತಿರೋದು' ಎಂದ. ಅದಕ್ಕೆ ಅವನು ಉತ್ತರ ಹೇಳದೇ ಗುರಾಯಿಸಿ ಹೊರಟುಹೋದ.

'ನಿಮ್ಮಂಥ ಮಾದರ್‌ಚೋದ್‌ಗಳು ಇರೋದ್ರಿಂದಲೇ ಇಲ್ಲಿ ಮದ್ವೆ ಆಗಬೇಕಾದ ಹುಡುಗಿಯರು ರಾಶಿ ರಾಶಿ ಜನ ಅಲ್ಲಾ ಇರೋದು' ಎಂದು ಕ್ಯಾಕರಿಸಿ ಉಗಿದ.

ಈಗ ರಿಯಾಜನನ್ನು ನೋಡುತ್ತಿದ್ದಂತೆ ಮದುಮಗನನ್ನು ನೋಡಿದಷ್ಟು ಸಿಟ್ಟುಬಂತು. 'ಪಂಕ್ತಿಯತ್ರ ಇರು ಅಂದ್ರೆ ಇಲ್ಲಿ ಯಾಕೆ ಬಂದೆ ಬಾಡ್ಕೊವ್' ಎಂದು ಬೈಯುತ್ತಾ ಉತ್ತರಕ್ಕಾಗಿ ಕಾಯದೇ ಮನೆಯೊಳಗೆ ಹೋದ.

ಹೊಸ್ತಿಲ ಬಳಿ ಅಬಿದಾ ಎದುರಾದಳು. ಕಂಕುಳಲ್ಲಿ ಮಗುವನ್ನು ಎತ್ತಿಕೊಂಡು ಬಟ್ಟಲಲ್ಲಿ ಅನ್ನ ಕಲೆಸುತ್ತಾ ಅವನಿಗೆ ತಿನ್ನಿಸುತ್ತಿದ್ದಳು. ಅಸ್ಲಾಂ ಅದನ್ನು ನೋಡಿ 'ಏನೆ ಇದು' ಎಂದು ಕೇಳಲಿಲ್ಲ.

'ಏನಾಯ್ತು' ಎಂದ.

'ಮದುಮಗಳ ಸ್ನೇಹಿತೆಯರು ಬಂದಾರಣ್ಣ. ಹಿಂದೂಗಳು. ಶಾಲೆಯಲ್ಲಿ ಜೊತೆಗೆ ಓದಿಕೊಂಡಿದಾರಂತೆ. ಅವರು ಪಲಾವ್ ತಿನ್ನುವುದಿಲ್ಲ. ಉಡುಪಿ ಹೋಟಲಿನಿಂದ ಪಾರ್ಸಲ್ ತರಿಸಲು ಹೇಳಿದ್ದಾರೆ' ಎಂದಳು ಅಬಿದಾ.

ಅಸ್ಲಾಮನಿಗೆ ಅರ್ಥವಾಗಲಿಲ್ಲ. 'ಮದುಮಗಳಿಗೆ ಸ್ನೇಹಿತೆಯರೇನು' ಎಂದ ಆಶ್ಚರ್ಯದಿಂದ. 'ಹಂಗದ್ರೇನಣ್ಣ. ಮದುಮಗಳಿಗೆ ಸ್ನೇಹಿತೆಯರು ಇರಬಾರ್ದಾ?'

'ಅವೆಲ್ಲಾ ಮಾತುಗಳು ಬೇಡ. ಪಲಾವು ತಿನ್ನದ ಸ್ನೇಹಿತರಿಗಾಗಿ ಮದುಮಗ ಹದಿನೈದು ಊಟ ತರಿಸಲು ಹೇಳಿದ, ತರಿಸಿದೆ. ಈಗ ಇವರಿಗೆ ಕೂಡಾ ಎಲ್ಲಿಂದ ತರಿಸೋದು. ಬಿಳಿ ಅನ್ನ ಸಿದ್ಧವಾಗ್ತಿದೆ. ಇಳಿಸುತ್ತಿದ್ದಂತೆ ಪುಂಡೆಪಲ್ಲೆ ಚಟ್ನಿ ಹಾಕಿ ಬಡಿಸಿಬಿಡು' ಎಂದು ಪಂಕ್ತಿಯ ಬಳಿ ಹೋದ.

ಅಷ್ಟೊತ್ತಿಗಾಗಲೇ ಗಂಡಿನ ಕಡೆಯವರೆಲ್ಲಾ ತಮ್ಮ ಹೆಣ್ಣುಮಕ್ಕಳ ಸಮೇತ ಊಟ ಮುಗಿಸಿದ್ದರು. ಈಗ ಹೆಣ್ಣಿನ ಕಡೆಯವರ ಸರದಿ. ಮೊದಲು ಗಂಡಸರು ಕೂತರು. ಅಸ್ಲಾಂ ಬೇಗಬೇಗನೆ ಡೇಕ್ಷಾ ಮುಚ್ಚಳ ತೆರೆದು ನೋಡಿ ಉಸಿರೆಳೆದುಕೊಂಡ. ಒದ್ದೆ ಸೀರೆ ಮೇಲೆ ಬಿಳಿಅನ್ನ ಹರಡಿ ಅದನ್ನು ಡೇಕ್ಷಾನಲ್ಲಿ ಬೆರೆಸಲು ಸೌಟನ್ನು ಹಿಡಿದಿದ್ದ ಬಾವರ್ಚಿ, ಅಸ್ಲಾಂನ ಗಡಿಬಿಡಿಯನ್ನು ನೋಡಿ ನಗುತ್ತಾ ಹೇಳಿದ.

'ಸರಿ ಹೋಗುತ್ತದೆ ಅಸ್ಲಾಂಭಾಯ್. ನೀನು ಹೋಗಿ ಪಂಕ್ತಿಯ ಬಳಿ ನಿಲ್ಲು'. ಅಸ್ಲಾಂ ಪಂಕ್ತಿಯ ಬಳಿ ಹೋಗುತ್ತಿದ್ದರೆ ಮತ್ತೆ ಮನೆಯೊಳಗಿಂದ ಕರೆ ಬಂತು. ಈ ಸಲ ಕರೆದದ್ದು ಮದುಮಗಳ ತಾಯಿ. 'ಅಸ್ಲಮಾ ದಹೇಜಿನಲ್ಲಿ ಯಾವ ವಸ್ತು ಕಡಿಮೆ ಇದ್ರೂ ಒಪ್ಪೋದಿಲ್ಲ ಅಂತಿದಾಳೆ ಹುಡುಗನ ತಾಯಿ. ಬೆಡ್‌ಲೈಟ್ ಸಹಿತ ಎಲ್ಲವೂ ಇರಬೇಕಂತೆ. ಆದರೆ ಬೆಡ್‌ಲೈಟನ್ನು ನಾವು ತಗೊಂಡಿಲ್ಲವಲ್ಲ' ಎಂದಳು ಗಾಬರಿಯಿಂದ. ಅಸ್ಲಾಂನಿಗೆ ಸರ್ರನೆ ಸಿಟ್ಟುಮನೆತ್ತಿಗೇರಿತು. 'ಏನಂತೆ.. ಈಗ ಆ ಮದುವೆ ಮಾಡಿಕೊಳ್ಳೋ ನನ್ಮಗನಿಗೆ ಬೆಡ್‌ಲೈಟನ್ನು ಕೊಂಡ್ಕೊಳ್ಳೋಕೆ ಆಗಲ್ವಂತೆನಾ. ವರದಕ್ಷಿಣ ಕೊಟ್ಟು, ಬಂಗಾರದಂತ ಹುಡುಗೀನ ಕೊಟ್ಟು, ಮಂಚ ಕೊಟ್ಟು, ಹಾಸಿಗೆ ಕೊಟ್ಟು ಇನ್ನೂ ಬೆಡ್‌ಲೈಟು ಕೂಡಾ ಕೊಡಬೇಕಾ. ಅಕ್ಕ ನನ್ ಬಾಯಿಗೆ ಒಳ್ಳೆ ಮಾತು ಬರಲ್ಲ. ಈಗ ಬೆಡ್‌ಲೈಟು ಕೊಡಕ್ಕಾಗಲ್ಲ. ಏನು ಮಾಡ್ಕೊಂತಾರೋ ಮಾಡಿಕೊಳ್ಳಲಿ...' ಎಂದು